(ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ)
**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ**
Phone no: 08232 224600
& Fax no:-08232-221417
E-mail:-dcmandya09@gmail.com

ಸಂ: ಸಿಬ್ಬಂದಿ (1)248/2016–17 ದಿನಾಂಕ: 21/12/2017.

## –: ತಿಳುವಳಿಕ ಪತ್ರ :–

**ವಿಷಯ:–** ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ 100 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ 1:5ರ ತಾತ್ಕಾಲಿಕ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಕುರಿತು.

**ಉಲ್ಲೇಖ:–** ಈ ಕಛೇರಿಯ ಇದೇ ಕ್ರಮಾಂಕದ ಅಧಿಕೃತ ಜ್ಞಾಪನ ಸಂಖ್ಯೆ: ಸಿಬ್ಬಂದಿ(1) 248/2016–17,ದಿನಾಂಕ:18.11.2017.

@@@@@@

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇದ್ದ 100 ಗ್ರಾಮಲೆಕ್ಕಿಗರ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಬೇಕಿರುವ ಹಿನ್ನೆಲೆಯಲ್ಲಿ 1:5ರ ಅನುಪಾತ ತಾತ್ಕಾಲಿಕ ಪಟ್ಟಿಯನ್ನು ವೆಬ್‌ಸೆಟ್ ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಸಂಬಂಧ ಜಿಲ್ಲಾಡತವು ದಿನಾಂಕ:04.01.2018ರಂದು ಸಾಮಾನ್ಯ ವರ್ಗದಡಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ, ದಿನಾಂಕ:05.01.2018ರಂದು ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಹಾಗೂ ಪ್ರವರ್ಗ–1ರಡಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಹಾಗೂ ದಿನಾಂಕ:06.01.2018ರಂದು 2ಎ, 2ಬಿ, 3ಎ, 3ಬಿ ವರ್ಗದಡಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಬೆಳಗ್ಗೆ 10.30 ಗಂಟೆಗೆ ಮೂಲ ದಾಖಲೆಗಳ ಪರಿಶೀಲನೆಗೆ ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ಪಟ್ಟಿಯಲ್ಲಿ ನೀವು ಆಯ್ಕೆಯಾಗಿರುತ್ತೀರಿ. ಆದ್ದರಿಂದ ನೀವು ಆಯ್ಕೆಯಾಗಿರುವ ಮೀಸಲಾತಿಯನ್ವಯ ಮೇಲೆ ತಿಳಿಸಿರುವ ದಿನಾಂಕದಂದು ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆಗೆ ತಪ್ಪದೆ ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿಗೆ ಹಾಜರಾಗತಕ್ಕದ್ದು, ತಪ್ಪಿದಲ್ಲಿ ನಿಮ್ಮನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

**ಹಾಜರುಪಡಿಸಬೇಕಿರುವ ದಾಖಲೆಗಳು:–**

| | |
|---|---|
| 1. | ಪಿ.ಯು.ಸಿ ಮೂಲ ಅಂಕಪಟ್ಟಿ |
| 2. | ಕಂಪ್ಯೂಟರ್ ಜ್ಞಾನದ ಬಗ್ಗೆ ಪ್ರಮಾಣ ಪತ್ರದ ದಾಖಲೆ. |
| 3. | ಜನ್ಮ ದಿನಾಂಕಕ್ಕೆ ಆಧಾರವಾಗಿ ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ.. |

| | |
|---|---|
| 4. | ಮಾಜಿ ಸೈನಿಕ ಮೀಸಲಾತಿಯಡಿ ಮಿಸಲಾತಿ ಕೋರಿದ್ದಲ್ಲಿ , ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಬಗ್ಗೆ ಪ್ರಮಾಣ ಪತ್ರ. |
| 5. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಎ, ಪ್ರವರ್ಗ–2ಬಿ,ಪ್ರವರ್ಗ–3ಎ,3ಬಿ ಗಳಡಿ ಮೀಸಲಾತಿ ಕೋರಿದ್ದಲ್ಲಿ ಜಾತಿ ಪ್ರಮಾಣ ಪತ್ರ. |
| 6. | ಗ್ರಾಮೀಣ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ 1 ರಿಂದ 10ನೇ ತರಗತಿ ರವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯಿಂದ ನೀಡಲ್ಪಟ್ಟ ಪ್ರಮಾಣ ಪತ್ರ. |
| 7. | ಕನ್ನಡ ಮಾಧ್ಯಮ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ 1 ರಿಂದ 10ನೇ ತರಗತಿ ವರೆಗೆ ಕನ್ನಡ ಮಾದ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯಿಂದ ನೀಡಲ್ಪಟ್ಟ ಪ್ರಮಾಣ ಪತ್ರ. |
| 8. | ಅಂಗವಿಕಲ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ ಅಂಗವಿಕಲ ಪ್ರಮಾಣ ಪತ್ರ . |
| 9. | ಯೋಜನಾ ನಿರಾಶ್ರಿತರ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲಿ ಸಂಬಂಧಿಸಿದ ತಹಸೀಲ್ದಾರ್ ರವರಿಂದ ವಿತರಿಸಲ್ಪಟ್ಟ ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ . |
| 10. | ಅರ್ಜಿ ಶುಲ್ಕ ಪಾವತಿಸುವ ಬಗ್ಗೆ ಅಂಚೆ ಕಛೇರಿಯ ಮೂಲ ಚಲನ್ |

<u>ಸೂಚನೆ:–</u>

* ಮೀಸಲಾತಿಯಡಿ ನೇಮಕಾತಿ ಕೋರಿರುವ ಅಭ್ಯರ್ಥಿಗಳು ಸಂಬಂಧಿಸಿದ ಮೀಸಲಾತಿ ಮೂಲ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ಇಲ್ಲವಾದಲ್ಲಿ ನೇಮಕಾತಿ ಪ್ರಕ್ರಿಯೆಯಿಂದ ಕೈ ಬಿಡಲಾಗುವುದು.
* ಅಭ್ಯರ್ಥಿಯು ಮೂಲ ದಾಖಲೆಗಳ ಒಂದು ಸೆಟ್ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಭಾವಚಿತ್ರದೊಂದಿಗೆ ಪರಿಶೀಲನಾ ತಂಡಕ್ಕೆ ನೀಡತಕ್ಕದ್ದು.

ಕಾರ್ಯದರ್ಶಿ,
ಗ್ರಾಮಲೆಕ್ಕಿಗರ ಆಯ್ಕೆ ಮತ್ತು ನೇರ
ನೇಮಕಾತಿ ಪ್ರಾಧಿಕಾರ ಹಾಗೂ ಅಪರ ಜಿಲ್ಲಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.

<u>ಇವರಿಗೆ,</u>

ದಿನಾಂಕ: 18–11–2017ರಂದು ಪ್ರಕಟಿಸಿರುವ
1:5ರ ಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳಿಗೆ
ಹಾಗೂ ಆಕ್ಷೇಪಣೆ ಪುರಸ್ಕೃತ ಅಭ್ಯರ್ಥಿಗೆ.